ವಿಷಯ :- ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಅನುಮತಿ ಕೋರಿಕೆ

ಶ್ರೀ ಹೆಚ್.ಡಿ. ರೇವಣ್ಣ (ವಸತಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 191ರಡಿಯಲ್ಲಿ ಈ ಹಕ್ಕುಚ್ಯುತಿ ನಿರ್ಣಯವನ್ನು ಮಂಡಿಸುತ್ತಿದ್ದೇನೆ. ತಾರೀಖು 27.8.96ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮುಖಪುಟದಲ್ಲಿ ವಿಧಾನಸಭೆಯಲ್ಲಿ ಪ್ರತಿಪಕ್ಷದ ನಾಯಕರಾದ ಬಿ.ಎಸ್. ಯಡಿಯೂರಪ್ಪನವರು ಮಾಡಿದ ಆರೋಪದ ಬಗ್ಗೆ ಈ ಕೆಳಕಂಡಂತೆ ಪ್ರಕಟಿಸಿದ್ದಾರೆ. ''ವಿಧಾನಸಭೆಯಲ್ಲಿ ಯಡಿಯೂರಪ್ಪನವರ ಆರೋಪ. ಪಿ.ವಿ.ಎನ್; ಗೌಡರ ಮಕ್ಕಳಿಂದ ಭಾರಿ ಭೂ ಕಬಳಿಕೆ''. ಈ ಒಂದು ಪ್ರಕಟಣೆಯಿಂದ ಈ ಸದನದ ಸದಸ್ಯನಾದ ನನ್ನ ಹಕ್ಕಿಗೆ ಚ್ಯುತಿಯುಂಟುಮಾಡಿದ್ದಾರೆ. ಇದು ಸತ್ಯಕ್ಕೆ ದೂರವಾದಂಥ ಮತ್ತು ಪ್ರಧಾನಿ ದೇವೇಗೌಡರ ಮಗನೆಂಬ ಒಂದೇ ಕಾರಣಕ್ಕಾಗಿ ಸದನದ ಸದಸ್ಯನಾದ ನನ್ನ ತೇಜೋವಧೆ ಮಾಡುವುದಕ್ಕೋಸ್ಕರ ಕರ್ನಾಟಕದ ಜನತೆಯ ಮುಂದೆ ನಾನು ಭಾರೀ ಭೂ ಕಬಳಿಕೆಯಲ್ಲಿ ತೊಡಗಿದ್ದೇನೆಂದು ಅಪಪ್ರಚಾರ ಮಾಡುವುದರ ಮೂಲಕ ನನ್ನ ಹಕ್ಕಿಗೆ ಚ್ಯುತಿಯುಂಟು ಮಾಡಿದ್ದಾರೆ.''

(ಈ ಹಂತದಲ್ಲಿ ವಿರೋಧ ಪಕ್ಷದ ಕೆಲವು ಸದಸ್ಯರುಗಳು ಆಕ್ಷೇಪ ವ್ಯಕ್ತಪಡಿಸಿದರು)

ಪತ್ರಿಕೆಯ ಮುಖಪುಟದಲ್ಲಿ ಬಾಕ್ಸ್ ಐಟಂ ಹಾಕಿ ಪ್ರಕಟಿಸಿರುವುದರಿಂದ ಇದು ಸತ್ಯಕ್ಕೆ ದೂರವಾಗಿರುವುದಲ್ಲದೆ ಇದನ್ನು ಉದ್ದೇಶಪೂರ್ವಕವಾಗಿ ಪ್ರಕಟಿಸಿದ ಸಂಯುಕ್ತ ಕರ್ನಾಟಕ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರು ವಿಧಾನಸಭಾ ಸದಸ್ಯನಾದ ನನ್ನ ಹಕ್ಕಿಗೆ ಚ್ಯುತಿ ತಂದಿದ್ದಾರೆ. ಈ ಮೇಲಿನ ಕಾರಣಗಳಿಂದ ಹಕ್ಕುಚ್ಯುತಿ ನಿರ್ಣಯವನ್ನು ಸದನದ ಹಕ್ಕುಚ್ಯುತಿ ಸಮಿತಿಗೆ ಒಪ್ಪಿಸಬೇಕೆಂದು ಕೋರುತ್ತೇನೆ. ಇದರೊಂದಿಗೆ ದಿನಾಂಕ 27. 8 . 96 ರ ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಪ್ರತಿಯನ್ನು ಲಗತ್ತಿಸಿರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ಒಂದು ಕೆಲಸ ಮಾಡಬಹುದು, ಹೇಗೂ ಅವರು ಚಾರ್ಜಸ್‌ಮಾಡಿದ್ದು, ಆ ಕುರಿತ- ಚಾರ್ಜಸ್‌ಗೆ ಉತ್ತರ ಕೊಡುವ ಸಂದರ್ಭದಲ್ಲಿ ಕೊಡಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ : ಇದರ ಬಗ್ಗೆ ಚರ್ಚೆಗೆ ತಾವು ಅವಕಾಶ ಮಾಡಿಕೊಡ ಬೇಕು. ಯಾವುದೋ ಒಂದು ಪತ್ರಿಕೆ ಬಗ್ಗೆ ಅವರು ಹೇಳಿರುವುದರಿಂದ ಅವರ ಅಭಿಪ್ರಾಯವನ್ನು ನಾವು ಒಪ್ಪುತ್ತಿಲ್ಲ.

ಶ್ರೀ ಎಸ್.ಕೃಷ್ಣಪ್ಪ ; ಮಾನ್ಯ ವಿರೋಧ ಪಕ್ಷದ ನಾಯಕರು ಬೇಕಾದರೆ ಅದನ್ನು ದಿನೇ ಮಾಡಲಿ.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಈ ಸದನದ ಸದಸ್ಯರ ಹಕ್ಕುಚ್ಯುತಿಯನ್ನು ಯಾರೇ ಮಾಡಿದರೂ ಕೂಡ ನಿಯಮದಡಿಯಲ್ಲಿ ಆ ಸದಸ್ಯರಿಗೆ ಸದನದಲ್ಲಿ ಹಕ್ಕುಚ್ಯುತಿ ನಿರ್ಣಯ ಮಂಡಿಸಲು ಅಧಿಕಾರವಿದೆ. ಅದು ಎಲ್ಲಾ ಸದಸ್ಯರು ಹಕ್ಕು. ಈ ಸದನದಲ್ಲಿ ಯಾರೇ ಆಗಿರಲಿ, ವಿರೋಧ -ಪಕ್ಷದ ನಾಯಕರಾಗಲೀ, ಆಡಳಿತ ಪಕ್ಷದವರಾಗಲೀ ಯಾರೇ ಸದಸ್ಯರ ಹಕ್ಕಿಗೆ ಚ್ಯುತಿಯುಂಟಾದರೆ ಬಹುಶಃ ಹಕ್ಕುಚ್ಯುತಿ ನಿರ್ಣಯವನ್ನು ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 191 ರಡಿ ಅಧಿಕೃತವಾಗಿ ಈ ಸದನದ ಮುಖಾಂತರ ಮಂಡಿಸುವುದಕ್ಕೆ ಅಧಿಕಾರವಿದೆ, ಇವೊತ್ತು ವಸತಿ ಸಚಿವರಾದ ಮಾನ್ಯ ರೇವಣ್ಣನವರು ಸಂಯುಕ್ತ ಕರ್ನಾಟಕ ದಿನಪತ್ರಿಕೆಯ ಮುಖಪುಟದಲ್ಲಿ ಪ್ರಕಟವಾಗಿರುವ ವಿಷಯದ ಬಗ್ಗೆ ಪ್ರಸ್ತಾಪಿಸಿದ್ದಾರೆ. ವಿರೋಧ ಪಕ್ಷದ ನಾಯಕರಾದ ಯಡಿಯೂರಪ್ಪನವರು ಮಾಡಿರುವ ಭಾಷಣ ಬೇರೆ, ಪ್ರಕಟವಾಗಿರುವುದು ಬೇರೆ. ಪತ್ರಿಕೆಯ ಮುಖಪುಟದಲ್ಲಿ ಪಿ. ವಿ. ಎನ್. ಗೌಡರ ಮಕ್ಕಳಿಂದ ಭಾರಿ ಭೂ ಕಬಳಿಕೆ. ಎಂಬ ಶೀರ್ಷಿಕೆಯಡಿ ಬಳಸಿರುವ ಪದಗಳ ಹಿನ್ನೆಲೆಯಲ್ಲಿ ಶ್ರೀಮಾನ್ ರೇವಣ್ಣನವರು ನಿಯಮ 191ರಡಿ ಹಕ್ಕು ಚ್ಯುತಿ ನಿರ್ಣಯವನ್ನು ಆ ಪತ್ರಿಕೆಯ ಸಂಪಾದಕರು ಮತ್ತು ಪ್ರಕಾಶಕರ ಮೇಲೆ ತಂದಿದ್ದಾರೆ. ಆದುದರಿಂದ, ಹಕ್ಕುಚ್ಯುತಿ ಪ್ರಶ್ನೆ ಬಂದಾಗ ಉಪಾಧ್ಯಕ್ಷರಾದ ತಾವು ಇದರ ಬಗ್ಗೆ ತೀರ್ಮಾನ ಕೊಡಬೇಕಾಗುತ್ತದೆ.

ಶ್ರೀ ಬಿ.ಎಸ್ . ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೇ, ಇದೊಂದು ಪ್ರಮುಖವಾದ ವಿಷಯ. ಸನ್ಮಾನ್ಯ ಸಚಿವರು ಹಕ್ಕುಚ್ಯುತಿ ನಿರ್ಣಯವನ್ನು ಸದನದ ನಿಯಮಾವಳಿ ಪ್ರಕಾರ ಮಂಡಿಸಿದ್ದಾರೆ. ಮಂಡಿಸುವುದಕ್ಕೆ ಅವರಿಗೆ ಸಂಪೂರ್ಣ ಅಧಿಕಾರವಿದೆ, ನಾನು ಅದರ ಬಗ್ಗೆ ಆಬ್ಜೆಕ್ಷನ್ ಮಾಡುತ್ತಿಲ್ಲ. ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಅವರು ತಮ್ಮ ಮುಂದೆ ಏನು ಹಕ್ಕುಚ್ಯುತಿ ಮಂಡಿಸಿದ್ದಾರೆ, ಅದರ ಪ್ರತಿ ಕಳುಹಿಸಿಕೊಡಿ. ಅದರ ಸಾಧಕ - ಭಾದಕ, ಸತ್ಯಾಂಶಗಳನ್ನು ನಾವೂ ನೋಡಬೇಕು. ಪತ್ರಿಕೆಯಲ್ಲಿ ಪ್ರಕಟವಾಗಿರುವ ವಿವರಗಳೇನು ಎಂಬುದನ್ನೆಲ್ಲಾ ನೋಡಿದ ನಂತರ ನಾಳೆ ಚರ್ಚೆಗೆ ತೆಗೆದುಕೊಳ್ಳಿ.

ಶ್ರೀ ಎಂ.ಸಿ.ನಾಣಯ್ಯ: ಇದು ಚರ್ಚಾ ವಸ್ತುವಲ್ಲ. ತಾವು ತೀರ್ಮಾನ ತೆಗೆದುಕೊಳ್ಳಬೇಕು.

(ಈ ಹಂತದಲ್ಲಿ ಹಲವಾರು ಸದಸ್ಯರುಗಳು ಏಕಕಾಲದಲ್ಲಿ ಒಟ್ಟಿಗೆ ಎದ್ದು ನಿಂತು ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ತಾವೆಲ್ಲರೂ ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನನ್ನದು ಕ್ರಿಯಾಲೋಪವಿದೆ. ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮ 192 ಏನು ಹೇಳುತ್ತದೆಂದರೆ.

" A member wishing to raise a question of privilege shall give notice in writing to the Secretary before the commnencement of the sitting on the day the question is proposed to be raised. If the question is raised based on the document, the notice shall be accompanied by the document. "

ಅಂದರೆ, ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆತವಾಗಿಯೇ ಅವರು .....

ಉಪಾಧ್ಯಕ್ಷರು : ಅವರು ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆತವಾಗಿಯೇ ನನ್ನ ಕೊಠಡಿಗೆ ಬಂದು ನೋಟೀಸ್ ಕೊಟ್ಟಿದ್ದಾರೆ.

ಶ್ರೀ ಎಂ .ಮಲ್ಲಿಕಾರ್ಜುನ ಖರ್ಗೆ : ಈಗ ತಮಗೆ ಸರ್ವ ಅಧಿಕಾರವಿದೆ, ನಿಯಮವನ್ನು ಸಸ್ಪೆಂಡ್ ಮಾಡಲೂಬಹುದು. ಆದರೆ, ನಿಯಮ 192ರಲ್ಲಿ ಸ್ಪಷ್ಟವಾಗಿ ಹೇಳುತ್ತದೆ. ಇದನ್ನು ಅವರು ಸದನ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಪ್ರಸ್ತಾಪಿಸಬೇಕಾಗಿತ್ತು.

ಶ್ರೀ ಕೆ.ಎನ್.ನಾಗೇಗೌಡ: ಅಧ್ಯಕ್ಷರು ಯಾವಾಗ ಅನುಮತಿ ಕೊಡುತ್ತಾರೋ ಆಗ ಪ್ರಸ್ತಾಪಿಸಬಹುದು.

(ಗೊಂದಲ)

1:50 ಪಿ . ಎಂ

ಶ್ರೀ ಬಿ.ಎಸ್. ಯಡಿಯೂರಪ್ಪ : ಪ್ರತಿಯೊಬ್ಬರಿಗೂ ನಿಯಮಾವಳಿಯ ಪ್ರಕಾರ ಮಾತನಾಡಲು ಅವಕಾತವಿದೆ. ಅದಕ್ಕೆ ವಿರುದ್ದವಾಗಿ ಮಾತನಾಡುವಂತಿಲ್ಲ. ನಿಮಗೆ ಮಾತನಾಡಲು ಎಷ್ಟು ಅಧಿಕಾರವಿದೆಯೋ ನಮಗೂ ಅಷ್ಟೇ ಅಧಿಕಾರವಿದೆ.

ಶ್ರೀ ಎಸ್. ಸುರೇಶ್‌ಕುಮಾರ್ : ನಿಯಮಾವಳಿಯ ಪ್ರಕಾರ ಅವರು.....

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ನಿಯಮದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

'A Member wishing to raise a question of privilege shall give notice in writing to the Secretary before the commencement of the sitting on the day the question is proposed to be raised. If the question raised is based on a document , the notice shall be accompanied by the document,"

ನಾನು ಹೇಳುವುದೇನೆಂದರೆ, ಇದರ ಬಗ್ಗೆ ಇಂದು ಚರ್ಚೆ ಪ್ರಾರಂಭವಾಗುವುದಕ್ಕೂ ಮೊದಲು ತೆಗೆದುಕೊಂಡಿದ್ದರೆ, ಅದನ್ನು ತಾವು ಒಪ್ಪಿಕೊಂಡಿದ್ದರೆ ಪರವಾಗಿರಲಿಲ್ಲ. ಆದರೆ ಚರ್ಚೆಯು ನಡೆಯುತ್ತಿರುವಾಗ ಮಧ್ಯದಲ್ಲಿ ಅವಿಶ್ವಾಸ ನಿರ್ಣಯದ ಬಗ್ಗೆ ವಿಷಯವಿದ್ದಾಗ ಯಾವುದೇ ಬೇರೆ ಸಂಗತಿಯನ್ನು ಇಲ್ಲಿ ತರಬಾರದು. ಅದು ಹಕ್ಕುಚ್ಯುತಿಯ ವಿಷಯವಿರಬಹುದು, ಯಾವುದಾದರೂ ಜರೂರು ವಿಷಯವಾಗಿರಬಹುದು, ಬೇರೆ ಯಾವುದೇ ವಿಚಾರದ ಬಗ್ಗೆ ಚರ್ಚೆ ಮಾಡಲು ಅವಕಾಶ ಮಾಡಿಕೊಡುವುದೇ ಇಲ್ಲ. ಪದ್ಧತಿ ಈ ರೀತಿ ಇರುವಾಗ ಅವಿಶ್ವಾಸ ನಿರ್ಣಯದ ಬಗ್ಗೆ ವಿಷಯವಿದ್ದಾಗ ಅಂಥ ಸಮಯದಲ್ಲಿ ಹಕ್ಕುಚ್ಯುತಿಯ ವಿಷಯವನ್ನು ರೈಸ್ ಮಾಡತಕ್ಕದ್ದು ಕಾನೂನು ಬಾಹಿರವಾಗುತ್ತದೆ. ಅದಕ್ಕೆ ಅವಕಾಶ ಮಾಡಿಕೊಡಬಾರದು. ಬೇಕಾದರೆ ಅವರಿಗೋಸ್ಕರ ವಿಶೇಷವಾದ ಅಧಿವೇಶನವನ್ನು ಕರೆದು ಇನ್ನೊಂದು ಸಲ ಪ್ರಸ್ತಾಪ ಮಾಡಲು ಅವಕಾಶ ಮಾಡಿಕೊಡಿ. ಇಲ್ಲದಿದ್ದರೆ ಅವರು ಹಕ್ಕುಚ್ಯುತಿಯ ಬಗ್ಗೆ ಹಕ್ಕುಚ್ಯುತಿ ಸಮಿತಿಗೆ ನೇರವಾಗಿ ಮಾಹಿತಿ ಕೊಟ್ಟು ನಿಯಮದ ಪ್ರಕಾರ ಹೋಗು. ಆದರೆ ನಿಯಮವನ್ನು ವಯಲೇಟ್ ಮಾಡಿ ಮಧ್ಯದಲ್ಲಿ ಹಕ್ಕುಚ್ಯುತಿ ವಿಷಯಕ್ಕೆ ಅವಕಾಶ ಮಾಡಿಕೊಡಬಾರದು. ಆ ರೀತಿ ಮಾಡಿದ್ದೇ ಆದರೆ ಅದು ಹೊಸ ಪದ್ಧತಿಯಾಗುತ್ತದೆ. ಮುಖ್ಯವಾಗಿ ಅವಿಶ್ವಾಸ ನಿರ್ಣಯಕ್ಕೆ ಮಹತ್ವವಿರುವುದಿಲ್ಲ ಎನ್ನತಕ್ಕದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ.ಪಿ. ನಾಣಯ್ಯ: ಮಾನ್ಯ ಉಪಾಧ್ಯಕ್ಷರೆ, ಅವರು ಕ್ರಿಯಾಲೋಪವನ್ನು ಎತ್ತಿದ್ದಾರೆ. ಅವರು ಆ ರೀತಿ ಎತ್ತುವ ಮೊದಲು ಮೊದಲೇ ಅವಕಾಶ ಪಡೆದುಕೊಳ್ಳಬೇಕಾಗಿತ್ತು ಎಂದು ಹೇಳಿದ್ದಾರೆ. ಆದರೆ ಅವರು ಇದರ ಬಗ್ಗೆ ಸೂಚನೆಯನ್ನು ಸದನವು ಪ್ರಾರಂಭವಾಗುವುದಕ್ಕೂ ಮೊದಲೇ ತಮಗೆ ಕೊಟ್ಟಿದ್ದಾರೆ. ಆ ರೀತಿ ಸೂಚನೆಯನ್ನು ಕೊಟ್ಟಮೇಲೆ ಅದರ ಬಗ್ಗೆ ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನುವ ತೀರ್ಪು ನೀಡುವ ಪರಮೋಚ್ಚ ಅಧಿಕಾರ ತಮಗೆ ಬಿಟ್ಟಿರತಕ್ಕ ವಿಚಾರವಾಗಿದೆ. ಇದರ ಬಗ್ಗೆ ಪ್ರಶ್ನೆ ಮಾಡುವ ಅಧಿಕಾರ ಈ ಸದನದಲ್ಲಿ ಯಾರಿಗೂ ಇಲ್ಲ.

(ಗೊಂದಲ)

ಶ್ರೀ ವೈ. ರಾಮಕೃಷ್ಣ: ಇದರ ಬಗ್ಗೆ ತಮಗೇಕೆ ಆ್ಯಂಗ್‌ಸೈಟಿ ?

ಶ್ರೀ ಎಂ.ಸಿ. ನಾಣಯ್ಯ: ನಮಗೆ ಇದರ ಬಗ್ಗೆ ಆ್ಯಂಗ್‌ಸೈಟಿಯೇನಿಲ್ಲ. ಅವರು ಎತ್ತಿರುವ ಕ್ರಿಯಾರೋಪಕ್ಕೆ ಉತ್ತರವನ್ನು ನೀಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರ ಕಛೇರಿಗೆ ನಿಯಮ 191ರ ಅಡಿಯಲ್ಲಿ ನೋಟೀಸನ್ನು ಕಳುಹಿಸಿಯಾದಮೇಲೆ ಅದರ ಬಗ್ಗೆ ಯಾವಾಗ ಚರ್ಚೆಗೆ ತೆಗೆದುಕೊಳ್ಳಬೇಕು ಎನ್ನತಕ್ಕ ವಿಚಾರದ ಬಗ್ಗೆ ಬಹುಶಃ ಅಧ್ಯಕ್ಷರು ಅವರ ವಿವೇಚನೆ ಮೇರೆಗೆ ತೀರ್ಮಾನಕೊಡುತ್ತಾರೆ. ಇದರ ಬಗ್ಗೆ ಚರ್ಚೆಗೆ ಯಾವಾಗ ತೆಗೆದುಕೊಳ್ಳಬೇಕೆಂದು ತೀರ್ಮಾನಕ್ಕೆ ಬಂದರೆ, ಮೊದಲನೆಯದಾಗಿ ಪ್ರಶ್ನೋತ್ತರದ ಸಮಯ ಮುಗಿದ ಮೇಲೆ ತೆಗೆದುಕೊಳ್ಳಬೇಕು, ಆದರೆ ಇಂದು ಪ್ರಶ್ನೋತ್ತರಗಳು ಇಲ್ಲ, ಆದ್ದರಿಂದ ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಅಥವಾ during the course of the session, ಯಾವಾಗ ಬೇಕಾದರೂ ತೆಗೆದುಕೊಳ್ಳಬಹುದು.

> Provided fruther that the Speaker may, if he is satisfied about the urgency of the matter, allow a question of privilege to be raised at any time during the course of a sitting, after the questions..

Read rule 195 which says:

> "If leave under Rule 194 is granted, the House may consider the question and come to a decision or refer it to a Committee or privileges on a motion made either by the member who has raised the question of privilege or by any other member,.

ಪ್ರಿವಿಲೇಜ್ ಎನ್ನತಕ್ಕದನ್ನು ನಿಯಮದ ಅಡಿಯಲ್ಲಿ ಪ್ರಶ್ನೋತ್ತರದ ಸಮಯ ಮುಗಿದ ಮೇಲೆ ತೆಗೆದುಕೊಳ್ಳಬೇಕೆಂದಿದ್ದರೂಕೂಡ ಮತ್ತು ಈ ಸದನ ಪ್ರಾರಂಭವಾಗುವುದಕ್ಕೂ ಮೊದಲು ಕೊಡಬೇಕೆಂದಿದ್ದರೂ ಸಹ ಈ ಸದನದಲ್ಲಿ ಯಾವುದೇ ಸದಸ್ಯರ ಹಕ್ಕುಚ್ಯುತಿ ತಂದಾಗ, ಮಾನ್ಯ ಸಭಾಧ್ಯಕ್ಷರು During the course of the day it can be raised on the floor of the House. It is your prerogative. Of course, your consent is necessary.. ಆದ್ದರಿಂದ ಎರಡು ಗಂಟೆಗಳ ಮೊದಲು ತಮ್ಮ ಕಛೇರಿಗೆ ಇದರ ಬಗ್ಗೆ ಕೊಟ್ಟಿರುವುದರಿಂದ ಮಾನ್ಯ ರೇವಣ್ಣನವರು ಎತ್ತಿರತಕ್ಕ ವಿಚಾರದ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ತಾವು ಅವರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ನೀವು ಕೊಟ್ಟಿರುವ ಅಧಿಕಾರದ ಹಿನ್ನೆಲೆಯಲ್ಲಿ ಅವರು ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. During the couse of the day- ಅದರ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲು ಸಂಪೂರ್ಣವಾದ ಅಧಿಕಾರ ತಮಗಿದ್ದು ಅದರ ಅನ್ವಯ ತಾವು ರೇವಣ್ಣನವರಿಗೆ ಅವಕಾಶ ಮಾಡಿಕೊಟ್ಟು ಅವರು ಅದರ ಬಗ್ಗೆ ಪ್ರಸ್ತಾಪ ಮಾಡಿದಮೇಲೆ ತಾಂತ್ರಿಕ

ಕ್ರಿಯಾಲೋಪವನ್ನು ಎತ್ತತಕ್ಕದ್ದು ಸರಿಯೇ? ಸದನದ ಸದಸ್ಯರ ಹಕ್ಕಿಗೆ ಚ್ಯುತಿ ಬಂದಾಗ ಅದರ ಬಗ್ಗೆ ಪ್ರಸ್ತಾಪ ಮಾಡಿದ್ದಕ್ಕೆ ಏಕೆ ನಮ್ಮ ಶಾಸಕ ಮಿತ್ರರು ವಿರೋಧ ಮಾಡುತ್ತಾರೆ? ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರತಕ್ಕದ್ದು ಈ ಸದನ. ಈ ವಿಷಯದ ಆಡ್ಮಿಸಿಬಿಲಿಟಿಯ ಬಗ್ಗೆ, ಇದು ಸರಿಯಾಗಿದೆಯೇ ಇಲ್ಲವೇ, ಆರ್ಡರ್‌ನಲ್ಲಿ ಇದೆಯೇ ಇಲ್ಲವೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕಾಗಿರತಕ್ಕವರು ಮಾನ್ಯ ಸಭಾಧ್ಯಕ್ಷರು. ಆದ್ದರಿಂದ ತಮ್ಮ ತೀರ್ಪಿಗೆ ತಾವು ನೀಡಿರುವ ಪರಮೋಚ್ಚ ತೀರ್ಮಾನಕ್ಕೆ ಇವರೇಕೆ ವಿರೋಧ ಮಾಡುತ್ತಾರೆ? ನನ್ನ ಹಕ್ಕಿಗೆ ಚ್ಯುತಿ ಬಂದಾಗ ಅದರ ಬಗ್ಗೆ ಈ ಸದನದಲ್ಲಿ ಎತ್ತಬೇಕಾದ ಅಧಿಕಾರ ನಮಗಿದೆ. ಹಾಗಿದ್ದಮೇಲೆ ತಾವುಗಳೇಕೆ ಇದರ ಬಗ್ಗೆ ವಿರೋಧವನ್ನು ಮಾಡುತ್ತೀರಿ? ನೀವು ಹೇಳಿದ್ದನ್ನೆಲ್ಲಾ ಕೇಳಿಕೊಂಡಿರಲು, ಪತ್ರಿಕೆಗಳಲ್ಲಿ ಬರೆದುಕೊಂಡಿರುವುದನ್ನೆಲ್ಲಾ ಕೇಳುವುದಕ್ಕೆ ನಾವಿಲ್ಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮಗೆ ಮಾತನಾಡಲು ಎಷ್ಟು ಅಧಿಕಾರವಿದೆಯೋ ಅಷ್ಟೇ ಅಧಿಕಾರ ನಮಗಿದೆ. ನಾವು ಇದರ ಬಗ್ಗೆ ವಿರೋಧ ಮಾಡುತ್ತಿಲ್ಲ.

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ: ತಾವು ತಮ್ಮ ಅಧಿಕಾರವನ್ನು ಉಪಯೋಗಿಸಿಕೊಳ್ಳಿ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಉಪಾಧ್ಯಕ್ಷರೆ, ಅವಿಶ್ವಾಸ ನಿರ್ಣಯದ ಬಗ್ಗೆ ಚರ್ಚೆಯಾಗುತ್ತಿರುವಾಗ ಬೇರೆ ವಿಷಯ ಬರಬಾರದು. ಬೇರೆ ವಿಚಾರಗಳನ್ನು ತಂದು ತಾವು ಅಧಿಕಾರದಲ್ಲಿ ಉಳಿದುಕೊಳ್ಳಲು ಪ್ರಯತ್ನ ಮಾಡುತ್ತಿದ್ದೀರಿ.

(ಗೊಂದಲ)

ಶ್ರೀ ಹೆಚ್. ಎನ್. ನಂಜೇಗೌಡ: ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಇದರ ಬಗ್ಗೆ ರೂಲಿಂಗ್‌ನ್ನು ರಿಸರ್ವ್ ಮಾಡಿ ಸಭೆಯ ಕಾರ್ಯಕಲಾಪಗಳನ್ನು ನಡೆಸೋಣ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ಕೊಂಡಿದ್ದೇನೆ.

ಉಪಾಧ್ಯಕ್ಷರು: ಮಾನ್ಯ ನಂಜೇಗೌಡರು ಸೂಚಿಸಿರುವ ಪ್ರಕಾರ ನಾನು ತಮ್ಮ ಸೂಚನೆಯನ್ನು ಪರಿಶೀಲಿಸಿ ಇಂದು ಸಂಜೆ ನನ್ನ ತೀರ್ಪನ್ನು ನೀಡುತ್ತೇನೆ. ಈಗ ಸದನವನ್ನು ಮುಂದೂಡಿ ಮಧ್ಯಾಹ್ನ ಮೂರು ಗಂಟೆಗೆ ಪುನಹ ಸಮಾವೇಶಗೊಳ್ಳೋಣ.

(ಸದನವು 2 ಗಂಟೆಗೆ ಮುಕ್ತಾಯಗೊಂಡು ಪುನಃ ಮೂರು ಗಂಟೆಗೆ ಸೇರಲು ನಿರ್ಧರಿಸಿತು)